





# ಅಪಾರ ಭಕ್ತರನ್ನು ಹೊಂದಿರುವ ಗುರುಕೊಟ್ಟೂರೇಶ್ವರ

ಕೊಟ್ಟೂರು ಪಟ್ಟಣ ಈ ಹಿಂದೆ ಬಳ್ಳಾರಿ ಜಿಲ್ಲೆಗೆ ಒಳಪಟ್ಟಿತ್ತು. ಕಳೆದ ಎರಡ್ಮೂರು ವರ್ಷಗಳಿಂದಷ್ಟೇ ನೂತನ ಜಿಲ್ಲೆಯಾಗಿ ಉದಯಸಿರುವ ವಿಜಯನಗರ ಜಿಲ್ಲೆಗೆ ಸದ್ಯ ಕೊಟ್ಟೂರು ಇದ್ದು ತಾಲೂಕು ಕೇಂದ್ರವೂ ಹೌದು.

ಜಿಲ್ಲೆಯ ಪ್ರಮುಖ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದು. ಬಸವೋತ್ತರ ಪರಂಪರೆಯಲ್ಲಿ ಸಾಮಾಜಿಕ ಅಸಮಾನತೆ, ಜಾತಿ ವ್ಯವಸ್ಥೆ ವಿರುದ್ಧ ಜನರನ್ನು ಎಚ್ಚರಿಸಿದವರಲ್ಲಿ ಕೊಟ್ಟೂರು ಗುರು ಬಸವೇಶ್ವರರು ಪ್ರಮುಖರು.

ಜೀವಿತಾವಧಿಯಲ್ಲಿ ಮರುಳನಂತೆ ಇದ್ದುಕೊಂಡೇ ಅಸಂಖ್ಯಾತ ಭಕ್ತರ ಮನಗೆದ್ದ ಗುರು ಬಸವೇಶ್ವರರು ಲಕ್ಷಾಂತರ ಭಕ್ತರ ಆರಾಧ್ಯ ದೈವ. ಕಾಯಕ ಯೋಗಿ, ಶರಣ, ಮಾನವತವಾದಿ. ಗುರು ಬಸವೇಶ್ವರ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಅರಸೀಕೆರೆ ಕೋಲಶಾಂತಯ್ಯ, ಹರಪನಹಳ್ಳಿ ಕೆಂಪಯ್ಯ, ಕೂಲಹಳ್ಳಿ ಮದ್ದಾನಸ್ವಾಮಿ ಅವರನ್ನು ಪಂಚಗಣಾಧೀಶ್ವರೆಂದು ಕರೆಯಲಾಗುತ್ತದೆ. ವೀರಶೈವ ಪರಂಪರೆಯ ನೂತನ ಗಣಗಳ ಪಟ್ಟಿಯಲ್ಲಿ ಕೊಟ್ಟೂರು ಗುರುಬಸವೇಶ್ವರರು ಪ್ರಮುಖರು.

ಒಂದು ಮೂಲದ ಪ್ರಕಾರ ಗುರುಬಸವೇಶ್ವರರು ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಹೊಸೂರಿನವರು. ಅಲ್ಲಿಂದ ಅವರು ಕರ್ನಾಟಕದ ಎಡೆಯೂರಿಗೆ ಬಂದು ಅಲ್ಲಿ ಸಿದ್ಧಲಿಂಗ ಯತಿಗಳ ಶಿಷ್ಯತ್ವ ಸ್ವೀಕರಿಸಿ ನಂತರ ಚಾಮರಾಜನಗರದಲ್ಲಿ ಧರ್ಮಕಾರ್ಯದಲ್ಲಿ ತೊಡಗಿದರು. ನಂತರ ಹಂಪಿಗೆ ಬಂದು ಅಲ್ಲಿಂದ ಕೊಟ್ಟೂರಿಗೆ ಬಂದರು ಎಂಬುದು ಭಕ್ತ ವಲಯದಲ್ಲಿ ಪ್ರಚಲಿತವಿದೆ. ಅವರ ಕಾಲ ಕ್ರಿ.ಶ.1580ರ ಅಸುಪಾಸು.

ಬಸವಲಿಂಗ ಕವಿ ಬರೆದ ಕೊಟ್ಟೂರು ಬಸವೇಶ್ವರ ಚರಿತ್ರೆ (1678) ಕೃತಿಯು ಕೊಟ್ಟೂರಿನ ಮೇಲೆ ಬೆಳಕು ಚೆಲ್ಲುತ್ತದೆ. ಜೊತೆಗೆ ಬಾಲಬಸವರು ಹಾಡುವ ಗೋಣಿ ಬಸವನ ಕಾವ್ಯಗಳು ಗುರುಬಸವೇಶ್ವರರ ಬಗ್ಗೆ ಸಾಕಷ್ಟು ಮಾಹಿತಿ ನೀಡುತ್ತವೆ. ಒಂದು ಕಾಲದಲ್ಲಿ ಜೈನರ ಕೇಂದ್ರ ಸ್ಥಳವಾದ ಕೊಟ್ಟೂರು ಗುರುಬಸವೇಶ್ವರರಿಂದಾಗಿ ಶೈವ ಪಂಥದ ಕೇಂದ್ರವಾಯಿತು.

ಗುರುಬಸವೇಶ್ವರರನ್ನು ಅವಧೂತರೆಂದೂ, ಇನ್ನು ಕೆಲವರು ಹುಚ್ಚಕೊಟ್ರಯ್ಯ ಎಂದೂ ಸಂಬೋಧಿಸುತ್ತಿದ್ದರು. ದೆಹಲಿಯ ಚಕ್ರವರ್ತಿ ಅಕ್ಬರ್ ಕೊಟ್ಟೂರಿಗೆ ಬಂದು ಏಳು ದಿನಗಳು ಕಾದಿದ್ದು ಎಂಟನೇ ದಿನ ಗುರುಬಸವೇಶ್ವರರ ದರ್ಶನ ಪಡೆದು ಕಾಣಿಕೆ ಅರ್ಪಿಸಿ ಆಶೀರ್ವಾದ ಪಡೆದರೆಂಬ ವಿಷಯವನ್ನು ಕೊಟ್ಟೂರಿನ ಕೆಲ ಜನರು ಇಂದಿಗೂ ನೆನಪು ಮಾಡಿಕೊಳ್ಳುತ್ತಾರೆ. ಹರಪನಹಳ್ಳಿ ಪಾಳೇಗಾರರು ತಮ್ಮ ಕಷ್ಟ ಕಾಲದಲ್ಲಿ ಅವರ ದರ್ಶನಕ್ಕೆ ಬರುತ್ತಿದ್ದರಂತೆ.

ಕೊಟ್ಟೂರಿನಲ್ಲಿ ಮೂರು ಕಲ್ಲುಮಠ, ಹಿರೇಮಠ ದರ್ಬಾರ್ ಮಠ, ತೊಟ್ಟಿಲು ಮಠ, ಗಚ್ಚಿನ ಮಠ ಹಾಗೂ ಮರಿ ಮಠ ಎಂಬ ಬಸವೇಶ್ವರರ ಐದು ಮಠಗಳಿವೆ. ಮೂರುಕಲ್ಲು ಮಠದಲ್ಲಿನ ಮೂರು ಶಿಲಾಗೋಪುರಗಳು ಚಾಲುಕ್ಯ ಮತ್ತು ಹೊಯ್ಸಳರ ಕಾಲದ ಜೈನ್ಯರ ಚೈತ್ಯಾಲಯಗಳ ಮಾದರಿಯಲ್ಲಿವೆ. ತೊಟ್ಟಿಲುಮಠದಲ್ಲಿ ಇರುವ ತೊಟ್ಟಿಲನ್ನು ತೂಗಿದರೆ ಸಂತಾನ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆ ಭಕ್ತರಲ್ಲಿದೆ. ಕಾರ್ತಿಕ ಮಾಸದಲ್ಲಿ ಬಸವೇಶ್ವರರ ಬೆಳ್ಳಿ ಪಲ್ಲಕ್ಕಿ ಉತ್ಸವ ಅದ್ಧೂರಿಯಾಗಿ ನಡೆಯುತ್ತದೆ. ಕಾರ್ತಿಕ ಮಾಸದ ಕೊನೆಯ ದಿನ ಬೆಳ್ಳಿ ರಥೋತ್ಸವ ಜರುಗುತ್ತದೆ.

**ಶ್ರಾವಣ, ಕಾರ್ತಿಕ ಮಾಸ ಹಾಗೂ ರಥೋತ್ಸವದ ಸಂದರ್ಭಗಳಲ್ಲಿ ಸಾವಿರಾರು ಭಕ್ತರು ಕೊಟ್ಟೂರಿಗೆ ಕಾಲ್ನಡಿಗೆಯಲ್ಲಿ ಬಂದು ಗುರು ಬಸವೇಶ್ವರರ ದರ್ಶನ ಪಡೆಯುತ್ತಾರೆ. ಭಕ್ತರು ತಂಗಲು ದೇವಸ್ಥಾನದ ಸಮೀಪ 30 ಕೊಠಡಿಗಳಿವೆ. ಅಲ್ಲದೆ ಪ್ರವಾಸೋದ್ಯಮ ಇಲಾಖೆಯ ಯಾತ್ರಿ ನಿವಾಸ ನಿರ್ಮಿಸಿದ್ದು ಸದ್ಯದಲ್ಲಿಯೇ ಅದನ್ನು ಮಠದ ಆಡಳಿತಕ್ಕೆ ಹಸ್ತಾಂತರಿಸಲಿದೆ. ಕೊಟ್ಟೂರಿನಲ್ಲಿ ಲಾಡ್ಜ್‌ಗಳಿವೆ.ಭಕ್ತರು ನೀಡುವ ದೇಣಿಗೆ ಹಣದಲ್ಲಿ ಅನ್ನ ಸಂತರ್ಪಣೆ ನಡೆಯುತ್ತದೆ. ಕೊಟ್ಟೂರು ಮಠ ಹಾಗೂ ದೇವಸ್ಥಾನ ಹಿಂದೂ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದೆ. ನುಗ್ಗಿಹಳ್ಳಿ ಪುರವರ್ಗದ ಹಿರೇಮಠದವರು ಮಠದ ಧಾರ್ಮಿಕ ಕಾರ್ಯಗಳನ್ನು ನೋಡಿಕೊಳ್ಳುತ್ತಾರೆ.**










